## ವ್ಯಾಖ್ಯಾನ

# <u>ಉದಯ ಅಸ್ತಮಾನವೆಂಬೊ ಎರಡು ಕೊಳಗವಿಟ್ಟು</u>

**ಹೋಗುತಿದೆ ಆಯು ಕಾಯೆನ್ನ**

ಶ್ರೀವೇದವ್ಯಾಸರು 'ದುರ್ಲಭೋ ಮಾನುಷೋ ದೇಹಃ' ಎಂದರು. ಈ ಸಾಧನ ಶರೀರ ಅತಿದುರ್ಲಭವಾದದ್ದು. ಲಭಿಸಿದಾಗ ಸದುಪಯೋಗಪಡಿಸಿಕೊಳ್ಳುವುದು ನಮ್ಮದಾಗಬೇಕು. ಇದಕ್ಕೆ ಜ್ಞಾನಿಗಳು-ಹರಿದಾಸರು ಅನೇಕ ರೀತಿ-ನೀತಿಗಳಿಂದ ಬೋಧಿಸಿರುವರು. ಶ್ರೀ ಪುರಂದರ ದಾಸರು ತಮ್ಮ ಒಂದು ಉಗಾಭೋಗದಲ್ಲಿ ಹುಟ್ಟಿ ಬಂದ ಮನುಷ್ಯನ ಇತಿಮಿತಿಗಳನ್ನು ತಿಳಿಸಿ, ಅದಕ್ಕೆ ಮಾಡಬೇಕಾದುದನ್ನು ತಿಳಿಸುವರು-

**ಉದಯ ಅಸ್ತಮಾನವೆಂಬೊ ಎರಡು ಕೊಳಗವಿಟ್ಟು**
**ಆಯಸ್ಸು ಎಂಬೊ ರಾಶಿ ಅಳೆದು ಹೋಗದ ಮುನ್ನ**
**ಹರಿಯ ಭಜಿಸಬೇಕು ಮನಮುಟ್ಟಿ**
**ಭಜಿಸಿದರೆ ತನ್ನ ಕಾರ್ಯವು ಘಟ್ಟಿ**
**ಹಾಗಿಲ್ಲದಿದ್ದರೆ ತಾಪತ್ರಯ ಬೆನ್ನಟ್ಟಿ**
**ವಿಧಿಯೊಳು ಗೆಯ್ವಾಗ ಹೋಗದಯ್ಯ ಕಟ್ಟಿ**
**ಪುರಂದರವಿಠಲನ ಕರುಣಾದೃಷ್ಟಿ**
**ಅವನ ಮೇಲಿದ್ದರೆ ಆವ ಜಗಜಟ್ಟಿ ।। –ಶ್ರೀಪುರಂದರದಾಸರು**

ಈ ಭೂಮಿಯಲ್ಲಿ ಹುಟ್ಟಿಬಂದವನ ಇರುವಿಕೆ ಅಸ್ಥಿರ. ಇದಕ್ಕೆ ವಾದಿರಾಜರಂದದ್ದು-

**ಈಗಲೋ ಇನ್ನಾವಾಗಲೋ ಈ ತನವು ಪೋಗದಿರದು ।**
**ಭೋಗದಾಶೆಯ ಬಿಡಿಸಯ್ಯ ನಾಗಶಯನ ನಳಿನನಯನ ।।** ಎಂದು.

ಒಂದಂತೂ ಸತ್ಯ, ಆಗ ತಾನೇ ಜನ್ಮ ತಾಳಿದ ಜೀವಿಯ ಮೇಲೆ ಪ್ರಮಾಣಪೂರ್ವಕ ಹೇಳಬಹುದಾದ ಭವಿಷ್ಯವೆಂದರೆ ಈ ದೇಹ ಒಂದು ದಿನ ಬೀಳುವುದಾಗಿ. ಆದರೆ ಯಾವಾಗ ಹೇಗೆ ಎಂಬುದು ತಿಳಿಯದು. ದಾಸರು ಈ ದೇಹ ನೀರಮೇಲಿನ ಗುಳ್ಳೆ ಯಂತೆಂದರು. ಹುಟ್ಟು-ಸಾವುಗಳ ಚಿತ್ರಣವನು ಕನಕರು ಕೊಟ್ಟದ್ದು - **ಹುಟ್ಟುತೇನು ತರಲಿಲ್ಲ ಸಾಯುತೇನು ಒಯ್ಯಲಿಲ್ಲ । ಸುಟ್ಟು ಸುಟ್ಟು ಸುಣ್ಣದ್ಹರಳು ಆಯಿತೀ ದೇಹ ।।** ಎಂಬುದಾಗಿ. ಇವರೇ ಮತ್ತೊಂದು ರೀತಿಯಲ್ಲಿ ವಾಸ್ತವತೆಯನ್ನು ತೆರೆದಿಟ್ಟದ್ದು ಹೀಗೆ –

**ಬತ್ತಲಿಂದ ಬರುತ್ತಿಹರು ಬತ್ತಲಿಂದ ಹೋಗುತಿಹರು ।**

**ಕತ್ತಲೆ ಕಾಲವನು ಬೆಳಕು ಮಾಡಿ ಹೊತ್ತು ಕಳೆವರು ।।** ಎಂದು.

ಶ್ರೀ ಪುರಂದರರು ಇದ್ದಷ್ಟು ಕಾಲವಾದರೂ ಎಷ್ಟೆಂಬುದನು ಸೂರ್ಯನ ಉದಯಾಸ್ತ-ಮಾನಗಳಿಂದ ಅಳೆದರು. ಸೂರ್ಯ ಉದಯಿಸಿ ಮುಳುಗಿದನೆಂದರೆ ನಮ್ಮ ಅಂತ್ಯಕ್ಕೆ ಸಮೀಪವಾಗುತ್ತಿದ್ದಂತೆ ಎಂಬುದಾಗಿ. ಯಾರಿಂದಲೂ ತಡೆಯಲಾಗದ್ದು. ದಾಸರು ಇಷ್ಟನ್ನು ತಿಳಿಸಿ ಸುಮ್ಮನಾಗದೇ ಸಜ್ಜನರು ಹೇಗಿದ್ದು ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳ-ಬೇಕೆಂಬುದನ್ನು ತಿಳಿಸುವರು. ಶ್ರೀ ವ್ಯಾಸರಾಜರು ಇನ್ನಾದರೂ ಪಶ್ಚಾತ್ತಾಪ ಬರಲೆನ್ನುವರು –

**ಹಿಂದಿನ ಕಾಲ ವ್ಯರ್ಥವಾಗಿ ಕಳೆದೆನೋ ।**

**ಮುಂದಿನ ಗತಿ ಚಿಂತೆ ಲೇಶವಿಲ್ಲವೋ ।।** ಎಂಬುದಾಗಿ.

ಶ್ರೀ ವಾದಿರಾಜರು 'ಹೋಗುತಿದೆ ಹೊತ್ತು ಕಳೆದೆ ವ್ಯರ್ಥವಾಗಿ । ಹರಿ-ಗುರುಗಳ ನೆನೆಯದೆ।' ಎಂದಾದರೂ ನೆನೆಯಿರೆಂದರು. ಮತ್ತೊಂದು ಸತ್ಯಾಂಶವನ್ನು ತಿಳಿಸಿದ್ದು ಹೀಗೆ –

**ಜನರು ದೇಹವ ಬಿಟ್ಟು ಪೋವುದ ನಾ ಕಂಡೆ ।**

**ಎನ್ನ ದೇಹ ಸ್ಥಿರವೆಂದು ತಿಳಿದುಕೊಂಡೆ ।।**

ಆಶ್ಚರ್ಯವಾದರೂ ಸತ್ಯಸಂಗತಿಯಾಗಿದೆ. ನಾನು ಚಿರಂಜೀವಿ ಎಂಬ ಭ್ರಾಂತಿ ಆವರಿಸಿದೆ. ಇದಕ್ಕೆ ಉತ್ತರ ರೂಪದಲ್ಲಿ ಶ್ರೀ ಪುರಂದರರು ಲೋಕದ ಜನರಿಗೆ ಆದೇಶ ನೀಡಿದರು –

**ದಾಳಿ ಬಾರದ ಮುನ್ನ ಧರ್ಮವ ಗಳಿಸಿರೋ ।**

**ಹಾಳು ಸಂಸಾರ ಸುಳಿಗೆ ಸಿಲುಕಬೇಡಿ ।। ಎಂಬುದಾಗಿ.**

ಆದರೆ ಸಾಮಾನ್ಯರ ಪ್ರವೃತ್ತಿ ಹೀಗಿರದು. ಆಯಸ್ಸು ಹೆಚ್ಚಿದಂತೆ ಮುಪ್ಪಿಗೆ ಹತ್ತಿರವೆಂದು ತಿಳಿಯದು. ಇಂದ್ರಿಯಗಳು ಕುಂಠಿತವಾದರೂ ಕಾಮನೆಗಳು ತಗ್ಗವು. ಇದನ್ನೇ ಶ್ರೀ ವ್ಯಾಸರಾಜರು –

**ದೇಹ ಜೀರ್ಣವಾಯಿತು ಧನಗೇಹ ಜೀರ್ಣವಾಗದು ।**

**ಅಯ್ಯ ಕಣ್ಣು ಕಿವಿ ಮಂದವಾದವು ಹೆಣ್ಣು ಮಣ್ಣಿನಾಶೆ ಮಂದವಾಗದು ।।**

ಎಂದು ತಿಳಿಸಿದರು. ವಾಸ್ತವಿಕ ಸಂಗತಿ 'ನಿನ್ನ ಪೊಂದಿಕೊಂಡು ಬರುವ ವಸ್ತು ಕೀರ್ತಿ-ಅಪಕೀರ್ತಿ ಎರಡೇ' ಎಂಬುದು. ಅದಕ್ಕೆ ಶ್ರೀದಾಸರು ಅಂದದ್ದು - **'ಏನು ಬರುವದೋ ಸಂಗಡೇನು ಬರುವುದೋ । ದಾನ ಧರ್ಮ ಮಾಡಿ ಬಹು ನಿದಾನಿ ಎನಿಸಿಕೊಳ್ಳೋ ಮನುಜ।।' ಎಂದು.** ಶ್ರೀ ಪ್ರಸನ್ನವೇಂಕಟರು ಸಜ್ಜನರ ಮೇಲಿನ ವಾತ್ಸಲ್ಯದಿಂದ ನುಡಿದದ್ದು ಹೀಗೆ –

'ವ್ಯರ್ಥ ಆಯು ಕಳೆಯಬ್ಯಾಡಿರೋ ಶ್ರೀಹರಿಯ ಸಂಕೀರ್ತನೆಯ ಮರೆಯಬ್ಯಾಡಿರೋ ಮೃತ್ಯು ಬಾರದಿರದು ಮುನ್ನೆ ಮನೆ ನೂರು ವರ್ಷಕೆ ।।' ಎಂಬುದಾಗಿ. ಶ್ರೀ ಪುರಂದರ ದಾಸರು 'ಮನ ಮುಟ್ಟಿ ಭಜಿಸಿದರೆ ತನ್ನ ಕಾರ್ಯವು ಘಟ್ಟಿ' ಎಂದದ್ದು ಎಲ್ಲರೂ ತಿಳಿದಿರಲೆಂದು. ಹೀಗಿಲ್ಲವಾದರೆ ತಾಪತ್ರಯಗಳು ಬೆನ್ನಟ್ಟಿ ಬಾರದಿರದೆಂದರು. ಎಲ್ಲ ರೀತಿಯ ಇಹಪರಂಗಳಲ್ಲಿ ಸುಖ ಜೀವನಕ್ಕೆ ಅವಶ್ಯವಾದದ್ದು ಶ್ರೀಹರಿಯ ಕರುಣಾದೃಷ್ಟಿ. ಅದಕ್ಕಾಗಿ ಭಗವಂತ ಶಾಸ್ತ್ರಗಳ ಮೂಲಕ ತಿಳಿಸಿದ ವಿಧಿ-ನಿಷೇಧಗಳ ಪಾಲನೆಯು ನಮ್ಮದಾಗಬೇಕೆಂದು ಹರಿದಾಸರು ನಾನಾ ರೀತಿ-ನೀತಿಗಳಿಂದ ತಿಳಿ ಹೇಳಿರುವರು. ಶ್ರೀ ಪುರಂದರರು ನಮ್ಮ ಬದುಕಿನ ಇತಿ-ಮಿತಿಗಳನ್ನು ತಿಳಿಸುತ್ತ, ಹೇಗಿದ್ದು

ಸದ್ಗತಿಯನ್ನು ಹೊಂದಿ, ಸುಖಿಯಾಗಿರಿ ಎಂದು ಸಜ್ಜನರ ಮೇಲಿನ ಕರುಣೆಯಿಂದ ತಿಳಿ ಹೇಳಿರುವರು.

**ಲೇಖಕರು:** Dr. ಶಾಮಾಚಾರ್, ಬೆಂಗಳೂರು